# SAMPLE PAPER FOR ANNUAL EXAMINATION 2011-12 <u>set -II</u>

**SUB : KANNADA** **CLASS – XII** **M.MARKS: 100** **TIME: 3 Hrs**

---

***ಸೂಚನೆಗಳು :*** *1. ಈ ಪ್ರಶ್ನೆ ಪತ್ರಿಕೆಯು ಎ,ಬಿ,ಸಿ, ಮತ್ತು ಡಿ ಎಂಬ ನಾಲ್ಕು ಭಾಗಗಳನ್ನೊಳಗೊಂಡಿರುತ್ತದೆ.*

- *ವಿಭಾಗ-A (ವ್ಯಾಕರಣ ) : 25 ಅಂಕಗಳು*
- *ವಿಭಾಗ-B ( ಅರ್ಥಗ್ರಹಿಕೆ ) : 10 ಅಂಕಗಳು*
- *ವಿಭಾಗ-C (ಬರವಣಿಗೆ ) : 15 ಅಂಕಗಳು*
- *ವಿಭಾಗ-D (ಪಠ್ಯಗಳ ಅಧ್ಯಯನ) : 50 ಅಂಕಗಳು*

---

## ವಿಭಾಗ-A (ವ್ಯಾಕರಣ) : ( ೨೫ ಅಂಕಗಳು)

**1.** ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆಯಿರಿ.

(i) ಕೆಳಗಿನ ವಾಕ್ಯವನ್ನು ಪ್ರಶ್ನಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ. 1
ಸುನಿತಾ ರಾಷ್ಟ್ರಗೀತೆಯನ್ನು ಹಾಡಿದಳು.

(ii) ಕೆಳಗಿನ ವಾಕ್ಯವನ್ನು ನಿಷೇಧಾರ್ಥದಲ್ಲಿ ಬಳಸಿ. 1
ಹುಡುಗರು ಊಟ ಮಾಡುವರು.

(iii) ಕೆಳಗಿನ ವಾಕ್ಯವನ್ನು ಸಾಮಾನ್ಯ ವಾಕ್ಯಗಳನ್ನಾಗಿ ಪರಿವರ್ತಿಸಿ. 1
ಬೆಂಗಳೂರಿನಲ್ಲಿ ಮರಗಳನ್ನು ಕಡಿದಿದ್ದರಿಂದ ಮಳೆ ಕಡಿಮೆಯಾಯಿತು.

(iv) ಈ ಕೆಳಗಿನ ವಾಕ್ಯವನ್ನು ವರ್ತಮಾನ ಕಾಲದಲ್ಲಿ ಬರೆಯಿರಿ. 1
ಶೀಲಾ ಅಭ್ಯಾಸ ಮಾಡಿದಳು.

(v) ಕೆಳಗಿನ ವಾಕ್ಯದಲ್ಲಿರುವ ಕ್ರಿಯಾಪದವನ್ನು ಗುರುತಿಸಿ ಅದರ ಧಾತುವನ್ನು ತಿಳಿಸಿ. 1
ಸಚಿನ್ ಕ್ರಿಕೆಟ್ ಆಟದಲ್ಲಿ ಚಿನ್ನದ ಪದಕವನ್ನು ಗಳಿಸಿದನು.

**2.** ಕೆಳಗಿನ ಗದ್ಯಾಂಶವನ್ನು ಕನ್ನಡಕ್ಕೆ ರೂಪಾಂತರಿಸಿ. 5

The plastic culture is highly embedded in today's man's life right from tooth paste tube to tablet cover. Many countries have recognised the evil effects of plastics, but it is yet to be strictly implemented in India. Neglecting Indian government's recommendation we do not go for eco-friendly or cloth bags. While at industrial level, thick plastics usage can not be abandoned, at least at domestic use it can be avoided. Using metal cans for bringing milk, oil etc.using banana leaves for food pocket parcel, cloth bags for vegetables, bamboo backets for vegetable transportation be followed. Plastic recycling causing air pollution also be avoided. 'No-smoking' to cigar, may pave way to 'No-plastics' now.

**3.** ಕೆಳಗಿನ ಯಾವುದಾದರೂ ಎರಡು ಪದ್ಯದ ಸಾಲುಗಳಿಗೆ ಪ್ರಸ್ತಾರ ಹಾಕಿ, ಗಣ ವಿಂಗಡಿಸಿ, ಛಂದಸ್ಸನ್ನು ಹೆಸರಿಸಿ. 2 ½ + 2 ½= 5

(i) ಕಲಹದೊಳಣ್ಣ ನಿಮ್ಮ ಕುಲವಾಕುಲಮಂ ನಿಮಗುಂಟುಮಾಡುಗುಂ.

(ii) ಶ್ರಾವ್ಯಂ ವಸುದಾತಳದೊಳ್
ನವ್ಯಂ ಭೂತೇಶ ಭಕ್ತ ಜನತಾ ಭಾವ್ಯಂ.

(iii) ಮಾರಿಗೌತಣವಾಯ್ತು ನಾಳಿನ
ಭಾರತವು ಚದುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲಿ ಸುಭಟ ಕೋಟಿಯನು.

(iv) ಪಾಡುವ ಪೆಣ್ದುಂಬಿ ನರ್ತಿಪ ನವಿಲು ಕೊಂ
ಡಾಡುವ ಬಾನ್ವಕ್ಕಿ ಪಡಿಯ!

**4.** ಕೆಳಗಿನ ಯಾವುದಾದರೂ ಎರಡು ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ. 2 1/2 +2 1/2 =5

(i) ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ?

(ii) ಕಬ್ಬು ಡೊಂಕಾದರೆ ಸಿಹಿ ಡೊಂಕೆ?.

(iii) ಮಾತು ಆಡಿದರೆ ಹೋಯ್ತು ಮುತ್ತು ಒಡೆದರೆ ಹೋಯ್ತು.

**5.** ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆಯಿರಿ.

(i) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ. 2

ಪಯಿರ್ಕೈದದಿರೆ. ಕೇಳ್ದಳ್ಕಿ. ನಡೆಗೆಟ್ಟು, ಕರತಳವನಿಕ್ಕಿ .

(ii) ಕೆಳಗಿನ ಪದಗಳಲ್ಲಿರುವ ವಿಭಕ್ತಿ ಪ್ರತ್ಯಯ ತಿಳಿಸಿ. 1

ರಾಮನಿಂ, ಹುಡುಗನು.

(iii) ಕೆಳಗಿನ ಕ್ರಿಯಾಪದಗಳ ಧಾತುಗಳನ್ನು ಬರೆಯಿರಿ. 2

ಮಿಂಚಿತು. ಮರುಗಿದರು. ನೋಡಿದಳು, ಪೊಕ್ಕಳ್.

## ವಿಭಾಗ-B (ಅರ್ಥಗ್ರಹಿಕೆ) : ( ೧೦ ಅಂಕಗಳು)

**6.** ಈ ಗದ್ಯಭಾಗವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

ಆಧುನಿಕ ಕನ್ನಡ ಸಾಹಿತ್ಯ ಲೋಕದಲ್ಲಿ ಬಿ. ಎಂ. ಶ್ರೀಕಂಠಯ್ಯನವರದು ಒಂದು ದೊಡ್ಡ ಹೆಸರು. ಇವರು ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನ ಸಂಪಿಗೆ ಎಂಬ ಹಳ್ಳಿಯಲ್ಲಿ ೩ನೇ ಜನವರಿ ೧೮೮೪ ರಲ್ಲಿ ಜನಿಸಿದರು. ಇವರ ತಂದೆ ಬೆಳ್ಳೂರಿನ ಮೈಲಾರಯ್ಯ, ತಾಯಿ ಭಾಗೀರಥಮ್ಮ. ಇವರ ಮಾಧ್ಯಮಿಕ ಶಿಕ್ಷಣ ಶ್ರೀರಂಗಪಟ್ಟಣದಲ್ಲಾದರೆ, ಪ್ರೌಢ ಶಿಕ್ಷಣ ಮೈಸೂರಿನಲ್ಲಿ ಆಯಿತು. ೧೯೦೯ ರಲ್ಲಿ ಇಂಗ್ಲೀಷನಲ್ಲಿ ಸ್ನಾತಕೋತ್ತರ ಪದವಿ ಪಡೆದರು."ದಿ ಹ್ಯಾಂಡಬುಕ್ ಆಫ್ ರಿಟಾರಿಕ್" ಎನ್ನುವ ಇಂಗ್ಲೀಷ ಕೃತಿ ರಚನೆಯಿಂದ ಶ್ರೀಯವರ ಸಾಹಿತ್ಯ ಬದುಕಿನ ಆರಂಭವಾಯಿತು. ಮುಂದೆ ಅವರು "ಶ್ರೀ" ಎಂಬ ಕಾವ್ಯನಾಮದಿಂದಲೇ ಜನಪ್ರಿಯರಾದರು. ಶ್ರೀಯವರಿಂದ "ಇಂಗ್ಲೀಷ ಗೀತೆಗಳು" ಎಂಬ ಅನುವಾದ ಕೃತಿ ಹೊಸಗನ್ನಡ ಕಾವ್ಯದಲ್ಲಿ ರಚಿತವಾದಾಗ ಆಧುನಿಕ ಕನ್ನಡ ಸಾಹಿತ್ಯ ದಿಗಂತದಲ್ಲಿ ಅರುಣೋದಯವಾಯಿತು. ಮುಂದೆ ಅವರು ರನ್ನನ "ಗದಾಯುದ್ಧ" ಆಧರಿಸಿ-"ಗದಾಯುದ್ಧ ನಾಟಕಂ" ರಚಿಸಿದರು. ಸೋಫೋಕ್ಲಿಸನ ರುದ್ರನಾಟಕ "ಏಜಾಕ್ಸ್" ನಾಟಕವನ್ನು ಆಧರಿಸಿ- "ಅಶ್ವತ್ಥಾಮನ್" ಹೊರ ಬಂತು."ಈಸ್ಕಿಲಸ್" ಕನ್ನಡಕ್ಕೆ "ಪಾರಸಿಕರು" ಆಗಿ ರೂಪತಳೆಯಿತು. ಈ ನಡುವೆಯೇ "ರಜತಮಹೋತ್ಸವ ಪ್ರಗಾಥ" ಹೊರ ಬಂದಿತು.

ಬಿ. ಎಂ. ಶ್ರೀಯವರು ಕೇವಲ ಕೃತಿ ರಚನೆಗಷ್ಟೇ ತಮ್ಮನ್ನು ತೊಡಗಿಸಿಕೊಳ್ಳದೆ, ಕನ್ನಡ ನಾಡನ್ನು ಒಂದುಗೂಡಿಸಲು ಶ್ರಮಿಸಿದರು. ಅನಾಥವಾಗಿದ್ದ ಕನ್ನಡವನ್ನು ಪೋಷಿಸಿ, ಬೆಳಸಿ "ಕನ್ನಡದ ಕಣ್ವ"ರೆನಿಸಿಕೊಂಡರು. ಆ ಮೂಲಕ ತಾವೊಬ್ಬರು ಕೇವಲ ವ್ಯಕ್ತಿ ಮಾತ್ರವಲ್ಲದೇ ನಡೆದಾಡುವ ಸಂಸ್ಥೆಯೆಂದು ತೋರಿಸಿಕೊಟ್ಟರು. ಬಿ.ಎಂ. ಶ್ರೀಯವರು ಮುಂದೆ ನಾಲ್ವಡಿ ಕೃಷ್ಣರಾಜ ಒಡೆಯರಿಂದ "ರಾಜಸೇವಾ ಪ್ರಸಕ್ತ" ಎಂಬ ಬಿರುದನ್ನು ಪಡೆದರು. ಶ್ರೀಯವರು ೧೯೨೮ ರಲ್ಲಿ ಕಲ್ಬುರ್ಗಿಯಲ್ಲಿ ನಡೆದ ೧೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷ ಪೀಠವೇರಿದಾಗ ಕನ್ನಡ ನಾಡು ಧನ್ಯತೆಯ ಭಾವ ಬೀರಿತು. ೧೯೪೧ ರಲ್ಲಿ ಕನ್ನಡದ ಮೊದಲನೆಯ ಅಭಿನಂದನಾ ಗ್ರಂಥ "ಸಂಭಾವನೆ " ಶ್ರೀಯವರಿಗೆ ಭಕ್ತಿ, ಶ್ರದ್ಧೆಗಳಿಂದ ಅರ್ಪಿತವಾಯಿತು. ಕನ್ನಡದ ಕಣ್ವ ೧೯೪೬ ರ ಜನವರಿ ೫ ರಂದು ಕನ್ನಡದ ಜನಕೋಟಿಯಿಂದ ದೂರವಾದರು.

**ಪ್ರಶ್ನೆಗಳು:**

i) ಬಿ.ಎಂ. ಶ್ರೀಯವರ ಸಾಹಿತ್ಯ ಬದುಕಿನ ಆರಂಭ ಯಾವ ಕೃತಿ ರಚನೆಯಿಂದ ಆಯಿತು? 1

ii) ಶ್ರೀಯವರು ರಚಿಸಿದ ಇತರ ಕೃತಿಗಳು ಯಾವವು? 2

iii) ಬಿ.ಎಂ. ಶ್ರೀಯವರು ನಾಡಿಗೆ ನೀಡಿದ ಸೇವೆ ಏನು? 2

iv) ಬಿ.ಎಂ. ಶ್ರೀಯವರಿಗೆ ಭಕ್ತಿ, ಶ್ರದ್ಧೆಗಳಿಂದ ಅರ್ಪಿತವಾದ ಅಭಿನಂದನಾ ಗ್ರಂಥ ಯಾವುದು? 1

7. ಕೆಳಗಿನ ಗದ್ಯಭಾಗವನ್ನು ಓದಿ ಅದರ ಮುಖ್ಯಾಂಶಗಳನ್ನು ಸಂಕ್ಷೇಪಿಸಿ ಬರೆಯಿರಿ. 4

ಅಧುನಿಕ ಜಗತ್ತಿನ ಸುಖ ಲೋಲುಪತೆಯಲ್ಲಿ ವಿಹರಿಸುತ್ತಿರುವ ಮಾನವ ಇಂದು ಪರಿಸರದ ಬಗ್ಗೆ ನಿರ್ಲಕ್ಷ್ಯ ತಾಳಿರುವುದು ವಿಪರ್ಯಾಸವಾಗಿದೆ. ಎಲ್ಲ ದಿಕ್ಕಿನಲ್ಲಿಯೂ ವಿಕಾಸವಾಗುತ್ತಿರುವ ಮನುಷ್ಯ ತಾನು ಬೆಳೆದ ಪ್ರಾಕೃತಿಕ ವಿಕಾಸದ ಮೆಟ್ಟಿಲುಗಳನ್ನೇ ನಾಶಗೊಳಿಸುತ್ತಿದ್ದಾನೆ. ತತ್ಫಲವಾಗಿ ಅನಾದಿಕಾಲದಿಂದ ಬೆಳೆದು ಬಂದ ಮಾನವ ಮತ್ತು ಪ್ರಕೃತಿಯ ನಡುವಿನ ಸಂಬಂಧದ ಸರಪಳಿ ಕಳಚಿ ಬೀಳುವ ಅಂಚಿನಲ್ಲಿದೆ. ಈ ಎರಡರ ನಡುವೆ ಅಸಮತೋಲನ ಹೆಚ್ಚಾಗಿ ಇಂದು ಉಸಿರಾಡುವ ಗಾಳಿ ವಿಷಮವಾಗಿದೆ. ಕುಡಿಯುವ ನೀರು ಕಲುಷಿತವಾಗಿದೆ. ಅಂತರ್ಜಲ ದೂರ ಸರಿದಿದೆ. ಶುದ್ಧವಾಯು, ಶುದ್ಧ ನೀರು, ಪೌಷ್ಟಿಕ ಆಹಾರವಿಲ್ಲದ ಇಂದಿನ ಸ್ಥಿತಿ ಚಿಂತಾಜನಕವಾಗಿದೆ. ಇಂತಹ ಸನ್ನಿವೇಶದಲ್ಲಿ ಜೀವ ಚಿಲುಮೆಯಾದ ಪರಿಸರವನ್ನು ಸಂರಕ್ಷಿಸಿ; ಸಮತೋಲನವನ್ನು ಕಾಯ್ದುಕೊಳ್ಳಲು ಹಲವಾರು ಯೋಜನೆಗಳನ್ನು ಹಾಕಿಕೊಳ್ಳಬೇಕಾಗಿದೆ. ಮೇಲ್ಛಾವಣಿ ಮಳೆ ನೀರಿನ ಸಂಗ್ರಹ, ಪರಿಸರ ಸ್ನೇಹಿ ಶೌಚಾಲಯಗಳ ನಿರ್ಮಾಣ, ಜಾಗ ಇರುವ ಪ್ರದೇಶಗಳಲ್ಲಿ ಗಿಡಗಳನ್ನು ನೆಡುವಿಕೆ, ಪ್ಲಾಸ್ಟಿಕ್ ಮತ್ತು ಇತರ ಮಾರಕ ವಸ್ತುಗಳ ಬಳಕೆಯನ್ನು ನಿಲ್ಲಿಸುವಿಕೆ, ಕೆರೆ–ಕುಂಟೆಗಳ ಸಂರಕ್ಷಣೆ, ಮುಂತಾದ ಯೋಜನೆಗಳನ್ನು ಕೈಕೊಂಡು ನಮ್ಮ ಭವಿಷ್ಯದ ಉಜ್ವಲ ಬದುಕನ್ನು ಹಸನುಗೊಳಿಸಿಕೊಳ್ಳಬೇಕು.

## ವಿಭಾಗ–C (ಬರವಣಿಗೆ) : ( ೧೫ ಅಂಕಗಳು)

8. ಕೆಳಗಿನವುಗಳಲ್ಲಿ ಒಂದನ್ನು ಕುರಿತು ನಿಮ್ಮ ಅನುಭವಗಳನ್ನು ಬರೆಯಿರಿ. 5

(i) ನಿಮ್ಮ ಮನೆಯ ಪಕ್ಕದ ಕಟ್ಟಡಕ್ಕೆ ಬೆಂಕಿ ತಗುಲಿದಾಗ.

(ii) ನೆರೆ ಪ್ರವಾಹದಿಂದ ನಿಮ್ಮ ಊರು ಜಲಾವೃತ್ತವಾದಾಗ.

9. ನಿಮ್ಮ ಊರಿನಲ್ಲಿ ಸ್ಥಾಪಿತವಾದ ಕೈಗಾರಿಕೆಗಳಿಂದ ಆಗುತ್ತಿರುವ ಪರಿಸರ ಮಾಲಿನ್ಯದ ಬಗ್ಗೆ ವಿವರಿಸುತ್ತ ಪತ್ರಿಕಾ ಸಂಪಾದಕರಿಗೆ ಒಂದು ಪತ್ರ ಬರೆಯಿರಿ. 5

10. ಕೆಳಗಿನ ಗದ್ಯಾಂಶವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ. 5

ಭಾಷೆಗಳ ಸಾವು ಹಲವಾರು ಬಾರಿ ಇತಿಹಾಸದಲ್ಲಿ ಪುನರಾವರ್ತನೆಯಾಗಿದೆ. ಭಾರಿ ಪ್ರವಾಹ ಇಲ್ಲವೆ ಯುದ್ಧಗಳು ಭಾಷೆಗಳ ಸಾವಿಗೆ ಅಲ್ಪ ಪ್ರಮಾಣದಲ್ಲಿ ಕಾರಣವಾದ ಅಂಶಗಳಾಗಿದ್ದರೂ ಯುರೋಪ್ ಸಂಸ್ಕೃತಿ ಆಧುನಿಕತೆಯ ಹೆಸರಿನಲಿ ವಿಶ್ವಾದ್ಯಂತ ಪ್ರಸರಿಸುತ್ತ ಸ್ಥಳೀಯ ಭಾಷೆಗಳ ಸಾವಿಗೆ ಕಾರಣವಾಗುತ್ತಿದೆ. ತಮ್ಮ ಪ್ರಾಚೀನ ಸಂಸ್ಕೃತಿ ಮತ್ತು ಭಾಷೆಗಳನ್ನು ಕೀಳಾಗಿ ಕಂಡು ವಿದೇಶಿ ಸಂಸ್ಕೃತಿಯನ್ನು ಅನುಸರಿಸುವುದು ಮತ್ತು ಅವರ ಭಾಷೆಯನ್ನಾಡುವುದೇ ಹೆಚ್ಚುಗಾರಿಕೆ ಎನ್ನುವ ಸಾಮೂಹಿಕ ಸನ್ನಿವೇಶ ಜಗತ್ತನ್ನಾವರಿಸಿದೆ.ಇದೇ ಸಂಸ್ಕೃತಿಯ ಅಧಃಪತನದ ಮೂಲ. ಸ್ಥಳೀಯ ಭಾಷೆಗಳ ಸಾವು ಎಂದರೆ ಅದು ಆ ಭಾಷೆಯನ್ನಾಡುತ್ತಿದ್ದವರ ದುರಂತ ಮಾತ್ರವಲ್ಲ, ಜಗತ್ತಿಗೇ ಆದ ಸಾಂಸ್ಕೃತಿಕ ನಷ್ಟ. ಈ ಕಾರಣಕ್ಕಾಗಿಯೇ ಯುನೆಸ್ಕೊ ಅಪಾಯದಲ್ಲಿರುವ ಭಾಷೆಗಳ ಉಳಿವಿಗಾಗಿ ಆಸಕ್ತಿ ತಳೆದು ೧೯೯೬ ರಲ್ಲಿ ಜಗತ್ತಿನಾದ್ಯಂತ ಅಪಾಯದಲ್ಲಿರುವ ಮತ್ತು ಅದೃಶ್ಯವಾಗಿರುವ ಭಾಷೆಗಳ ನಕ್ಷೆಯನ್ನು ಸಿದ್ಧಪಡಿಸಿತು. ಯುನೆಸ್ಕೊದ ಈ ಶ್ರಮ ಪ್ರಶಂಸಾರ್ಹ.

ಭಾಷೆಗಳ ನಾಶ ಎನ್ನುವುದು ಒಂದು ದೇಶಕ್ಕೆ ಸೀಮಿತವಾದುದಲ್ಲ. ಇಂಗ್ಲೀಷ ವ್ಯಾಮೋಹಕ್ಕೆ ಒಳಗಾಗಿರುವ ವಿಶ್ವದ ಎಲ್ಲ ಪ್ರದೇಶಗಳ ಭಾಷೆಗಳು ಅಪಾಯದಲ್ಲಿವೆ. ಆದ್ದರಿಂದ ಅಳಿವಿನ ಹಾದಿಯಲ್ಲಿರುವ ಭಾಷೆಗಳ ಉಳಿವಿಗಾಗಿ ಭಾರೀ ಆಸಕ್ತಿ ತೋರಬೇಕಾಗಿದೆ.ಅವರವರ ಭಾಷೆಯನ್ನು ಕಲಿಯಲು ಯುವ ಪೀಳಿಗೆಯನ್ನು ಪ್ರೋತ್ಸಾಹಿಸಬೇಕಾಗಿದೆ. ಆ ಮೂಲಕ ವಿದೇಶಿ ಭಾಷೆ ಮತ್ತು ಸಂಸ್ಕೃತಿಯನ್ನು ಅಪ್ಪಿಕೊಳ್ಳುವವರ ಕಣ್ತೆರಸಬೇಕಾಗಿದೆ.

## ವಿಭಾಗ–D (ಪಠ್ಯಗಳ ಅಧ್ಯಯನ): (೩೦ ಅಂಕಗಳು)

### ಗದ್ಯಭಾಗ

**11.** ಕುವೆಂಪು ಅವರ ಧಾರ್ಮಿಕತೆ ಮತ್ತು ವೈಚಾರಿಕತೆಯನ್ನು ಲೇಖಕರು ಹೇಗೆ ಚಿತ್ರಿಸಿದ್ದಾರೆ? 7

ಅಥವಾ

ಧರ್ಮದ ನಿಯಮ ಪಾಲಿಸಲು ಪ್ರಕೃತಿ ವಿರುದ್ಧ ಹೋರಾಟ ಮಾಡುವ ಮನುಷ್ಯ ಪ್ರವೃತ್ತಿಯ ವಿಫಲತೆಯನ್ನು ಚಿತ್ರಿಸಿರಿ.

**12.** ಕೆಳಗಿನ ಯಾವುದಾದರೂ ಎರಡು ವಿಷಯಗಳ ಬಗ್ಗೆ ಟಿಪ್ಪಣಿ ಬರೆಯಿರಿ. 4+4=8

i) ನಾಲ್ವರು ಭಟರು ಕುರಿಯನ್ನು ಸುಟ್ಟು ತಿಂದ ಪ್ರಸಂಗವನ್ನು ವಿವರಿಸಿ.
ii) ಟ್ಯಾಕ್ಸಿ ಹತ್ತಿದ ಲೇಖಕರು ಹೆದರಿದ ಪರಿಯನ್ನು ವಿವರಿಸಿ.
iii) ಅನಿಸ್ಸಾಳ ರೋಗಕ್ಕೆ ಚಿಕಿತ್ಸಾ ಉಪಾಯ ಫಲಿಸಿದ ನಂತರ ಅಮೇರಿಕಾದ ಪ್ರಜೆಗಳು ಹೇಗೆ ಪ್ರತಿಕ್ರಿಯಿಸಿದರು?
iv) ಕವಿರಾಜಮಾರ್ಗದ ವೈಶಿಷ್ಟ್ಯಗಳನ್ನು ಲೇಖಕರು ಹೇಗೆ ವಿವರಿಸಿದ್ದಾರೆ.?

### ಪದ್ಯಭಾಗ

**13.** ಹೆಣ್ಣಿಗೆ ಹೆಣ್ಣೇ ಅಭಯ ನೀಡಬೇಕಾದ ಅನಿವಾರ್ಯತೆ 'ತಂಗಿ ಹುಟ್ಟಿದಳು' – ಈ ಕವನದಲ್ಲಿಹೇಗೆ ಮೂಡಿ ಬಂದಿದೆ? ವಿವರಿಸಿ. 7

ಅಥವಾ

ಭೀಮಾಲಾಪದಲ್ಲಿ ವ್ಯಕ್ತವಾದ ಭೀಮನ ತೊಳಲಾಟವನ್ನು ವಿವರಿಸಿ.

**14.** ಕೆಳಗಿನ ಯಾವುದಾದರೂ ಎರಡು ವಿಷಯಗಳ ಬಗ್ಗೆ ಟಿಪ್ಪಣಿ ಬರೆಯಿರಿ. 4+4=8

i) ಮಾನವರ ಅಹಂಕಾರವನ್ನು ದಾಸಿಮಯ್ಯ ಹೇಗೆ ವಿಡಂಬಿಸಿದ್ದಾನೆ?
ii) ಮಡದಿಯನ್ನು ಹೇಗೆ ಒಲಿಸಿಕೊಳ್ಳಬೇಕೆಂದು ಹೊನ್ನಮ್ಮ ಹೇಳುತ್ತಾಳೆ?
iii) ದುರ್ಯೋಧನನು ನೀರೊಳಗಿದ್ದು ಬೆವತಿದ್ದು ಏಕೆ?
iv) ಪೆಟ್ರೋಮ್ಯಾಕ್ಸ್ ಹೊತ್ತವರನ್ನು ಕವಿ ಹೇಗೆ ಪರಿಚಯಿಸುತ್ತಾನೆ?

### ನಾಟಕ

**15.** ಏಕಲವ್ಯನ ಸಾಹಸಗಳನ್ನು ಮೇಳದವರು ಹೇಗೆ ಬಣ್ಣಿಸುತ್ತಾರೆ?ವಿವರಿಸಿ. 6

ಅಥವಾ

ಸೈನಿಕರ ಸಂಭಾಷಣೆಯಲ್ಲಿ ಯುದ್ಧದ ಅಪ್ರಯೋಜಕತೆ ಹಾಗೂ ವ್ಯರ್ಥ ಹಾನಿಗಳು ಹೇಗೆ ವ್ಯಕ್ತವಾಗಿವೆ? ವಿವರಿಸಿ.

**16.** ಕೆಳಗಿನ ಯಾವುದಾದರೂ ಎರಡು ವಿಷಯಗಳ ಬಗ್ಗೆ ಟಿಪ್ಪಣಿ ಬರೆಯಿರಿ. 3+3=6

i) ಕಾಡಿನ ವೀರ ಏಕಲವ್ಯನನ್ನು ಕುರಿತು ದುರ್ಯೋಧನನ ಅಭಿಪ್ರಾಯವೇನು?

ii) ಅಸಮಾನತೆ ನಿಸರ್ಗ ಸಹಜ ಎಂದು ದ್ರೋಣಾಚಾರ್ಯರು ಹೇಳುವ ಬಗೆ ಯಾವುದು?

iii) ಏಕಲವ್ಯ ನಿಜವಾದ ವೀರ ಎಂದು ಅರ್ಜುನ ಹೇಳಿದ್ದು ಹೇಗೆ?

## ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ(ಕವಿ-ಕೃತಿ ಹಿನ್ನೆಲೆಯಲ್ಲಿ)

**17.** ಕೆಳಗಿನ ಯಾರಾದರೂ ಇಬ್ಬರು ಕವಿ, ಕೃತಿ ಪರಿಚಯ ಮಾಡಿ ಕೊಡಿ. 4+4=8

i) ರನ್ನ.

ii) ರಾಘವಾಂಕ.

iii) ದ. ರಾ. ಬೇಂದ್ರೆ.

********